ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
Office of the Registrar Evaluation, Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ:ಬೆಂ.ನ.ವಿ./ಪ.ವಿ./01/ಅಂ.ಪ./2023–24 ದಿನಾಂಕ:16.12.2023

# ಸುತ್ತೋಲೆ

ಬೆಂಗಳೂರು ನಗರ ವಿಶ್ವವಿದ್ಯಾಲಯ ಪ್ರಾರಂಭವಾದ ನಂತರ ಆಯಾ ಸೆಮಿಸ್ಟರ್‌ಗಳಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಅಂಕ ಪಟ್ಟಿಗಳು ಹಾಗೂ 2022ರಲ್ಲಿ ನಡೆದ ಪ್ರಥಮ ಘಟಿಕೋತ್ಸವ ಮತ್ತು 2023ರಲ್ಲಿ ನಡೆದ ದ್ವಿತಿಯ ಘಟಿಕೋತ್ಸವದಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳ ಪದವಿ ಪ್ರಮಾಣ ಪತ್ರಗಳು ಕಾಲೇಜುಗಳಿಗೆ ವಿತರಿಸಲು ಸಿದ್ಧವಾಗಿದೆಯೆಂದು ತಿಳಿಸಿ, ಇವುಗಳನ್ನು ತೆಗೆದುಕೊಂಡು ಹೋಗುವಂತೆ ಕಾಲೇಜುಗಳಿಗೆ ದಿನಾಂಕ 07.08.2023 ಮತ್ತು 02.09.2023 ರಂದು ಎರಡುಸಾರಿ ಸುತ್ತೋಲೆಗಳನ್ನು ಕಳುಹಿಸಲಾಗಿದೆ. ಇದೇ ರೀತಿಯ ಮಾಹಿತಿಯನ್ನು ಪ್ರಾಂಶುಪಾಲರ ಗ್ರೂಪಿನಲ್ಲೂ ತಿಳಿಸಲಾಗಿದೆ. ಆದರೂ ಸಹ ಕೆಲವು ಕಾಲೇಜುಗಳು ಅಂಕ ಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ತೆಗೆದುಕೊಂಡು ಹೋಗದಿರುವುದು ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿರುತ್ತದೆ. ಅನೇಕ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳ ಪೋಷಕರು ವಿಶ್ವವಿದ್ಯಾಲಯಕ್ಕೆ ಬಂದು ಈ ಬಗ್ಗೆ ವಿಚಾರಿಸುತ್ತಿದ್ದಾರೆ, ಆದುದರಿಂದ ಈ ಸುತ್ತೋಲೆ ದಿನಾಂಕದಿಂದ 15 ದಿನಗಳ ಒಳಗಾಗಿ ಅಂದರೆ 30.12.2023ರ ಒಳಗೆ ಮುದ್ರಣಗೊಂಡು ಸಿದ್ಧವಾಗಿರುವ ಅಂಕ ಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪದವಿ ಪ್ರಮಾಣ ಪತ್ರಗಳನ್ನು ತೆಗೆದುಕೊಂಡು ಹೋಗಬೇಕೆಂದು ಈ ಮೂಲಕ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ತಿಳಿಸಲಾಗಿದೆ. ಒಂದುವೇಳೆ ಈ ದಿನಾಂಕದೊಳಗೆ ತೆಗೆದುಕೊಂಡು ಹೋಗದಿದ್ದರೆ ಪ್ರತಿ ದಿನಕ್ಕೆ ರೂ. 500/– ದಂಡ ಶುಲ್ಕ ಪಾವತಿಸಿ ತೆಗೆದುಕೊಂಡು ಹೋಗಬೇಕಾಗುತ್ತದೆ ಎಂಬುದನ್ನು ಗಮನಿಸಲು ಸೂಚಿಸಿದೆ.

ಕೆಲವು ಕಾಲೇಜುಗಳು ವಿಶ್ವವಿದ್ಯಾಲಯಕ್ಕೆ, ಕೆಲವು ರೀತಿಯ ಶುಲ್ಕ ಪಾವತಿಸುವುದು ಬಾಕಿ ಇದ್ದು ಬಾಕಿ ಹಣವನ್ನು ಪಾವತಿ ಮಾಡಿ ಪ್ರಮಾಣ ಪತ್ರಗಳನ್ನು ತೆಗೆದುಕೊಂಡು ಹೋಗುವಂತೆಯೂ ಈ ಹಿಂದೆ ತಿಳಿಸಲಾಗಿದ್ದರೂ, ಕೆಲವು ಕಾಲೇಜಿನ ಪ್ರಾಂಶುಪಾಲರು ಬಾಕಿ ಶುಲ್ಕ ಪಾವತಿ ಮಾಡದಿರುವುದು ಸಹಾ ಕಂಡುಬಂದಿದ್ದು ಆದಷ್ಟು ಬೇಗ ಬಾಕಿ ಹಣವನ್ನು ಪಾವತಿಸಿ ಪದವಿ ಪ್ರಮಾಣ ಪತ್ರಗಳನ್ನು ತೆಗೆದುಕೊಂಡು ಹೋಗಲು ತಿಳಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)
Registrar (Evaluation)
Bengaluru City University
Central College Campus
Bengaluru - 560 001

ಗೆ.

01. ಬೆಂಗಳೂರು ನಗರ ವಿಶ್ವವಿದ್ಯಾಲಯದ
ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು
ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು.

01. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
02. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲ್ಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು